ಒಂದೆರಡು ವರ್ಷಗಳು ಕಳೆಯುತ್ತಿದ್ದಂತೆ ಈ ನಿರಾಳತೆಯ ಸುಖ ಕ್ಷಣಿಕವಾದದ್ದು ಎಂದು ಅರಿವಾಯಿತು. ಬಿದ್ದ ಮಳೆಗೆ ಮರ ಚಿಗುರುತ್ತಾ... ಚಿಗುರುತ್ತಾ... ಎಲ್ಲೆಲ್ಲಿ ಕಡಿಯಲಾಗಿತ್ತೋ ಅದರ ಬುಡದಿಂದ ಮತ್ತೆ ಕೊಂಬೆಗಳು ಟಿಸಿಲೊಡೆಯಲಾರಂಭಿಸಿದವು. ನಾವೇ ಮನೆಯ ಕಾಂಪೌಂಡ್‌ನೊಳಗೆ ಚಾಚಿ ಬಂದಿರುವ ಕೊಂಬೆಗಳನ್ನು ಅಲ್ಪಸ್ವಲ್ಪ ಸವರೋಣವೆಂದರೆ ನಮ್ಮ ಕೈಗೆ ಸಿಗದಷ್ಟು ಇನ್ನೂ ಎತ್ತರಕ್ಕೆ ಬೆಳೆದುಬಿಟ್ಟಿತ್ತು ಆ ಮರ. ಏನು ಮಾಡೋದು ಎಂದು ಯೋಚಿಸಿ ಯೋಚಿಸಿ ಸಾಕಾಗಿಹೋಯಿತು. ಹಿಂದಿನಂತೆ ಸಂಬಂಧಿಸಿದ ಇಲಾಖೆಯನ್ನು ಸಂಪರ್ಕಿಸೋಣವೆಂದರೆ ಆ ಇಲಾಖೆಯೇ ಎತ್ತಂಗಡಿಯಾಗಿತ್ತು. ಗಾರೆಯವರು, ಮನೆ ಕೆಲಸದವರು, ಖಾಲಿ ಸೈಟ್ ಸ್ವಚ್ಛ

